# ಹೃತ್ಪೂರ್ವಕ ಗ್ರಹಿಕೆ

ಪ್ರಿಯ ಸ್ನೇಹಿತರೆ,

ಶಿವಾಜಿಯ ಗುರುಗಳಾಗಿದ್ದ ರಾಮದಾಸ ಸ್ವಾಮಿಗಳು ರಾಮಾಯಣದ ಕಥೆಯನ್ನು ಎಂತಹ ದೈವಿಕ ರೀತಿಯಲ್ಲಿ ಹೇಳುತ್ತಿದ್ದರೆಂದರೆ, ಸಾಕ್ಷಾತ್ ಹನುಮಂತನೇ ಮಾರುವೇಷದಲ್ಲಿ ಬಂದು ಆಲಿಸುತ್ತಿದ್ದನೆಂದು ಪ್ರತೀತಿಯಿದೆ. ಅಂತಹ ಒಂದು ಪ್ರವಚನದಲ್ಲಿ, ಸೀತೆಯ ಅಪಹರಣವಾಗಿ ಆಕೆ ಕಾಣೆಯಾದ ನಂತರ ಹನುಮಂತನು ಆಕೆಯನ್ನು ಮೊದಲ ಬಾರಿ ಕಂಡ ಸಂದರ್ಭವನ್ನು ರಾಮದಾಸರು ವಿವರಿಸುತ್ತಾರೆ. ರಾವಣನ ಉದ್ಯಾನವನದಲ್ಲಿ ಆಕೆ ಶ್ವೇತಪುಷ್ಪಗಳ ನಡುವೆ ಕುಳಿತಿರುವುದನ್ನು ಆತ ನೋಡುತ್ತಾನೆ.

ಈ ಕಥೆಯನ್ನು ಕೇಳುತ್ತಿದ್ದಂತೆ, ಮಗ್ನನಾಗಿ ಕುಳಿತಿದ್ದ ಹನುಮಂತ ಬೆಚ್ಚಿ ಏಳುತ್ತಾನೆ. ತನ್ನ ಮಾರುವೇಷವನ್ನು ಕಳಚಿ ಎದ್ದುನಿಂತು, "ಸ್ವಾಮಿ, ನನ್ನೊಡೆಯನ ಕಥೆಯನ್ನು ಕೇಳುವುದಕ್ಕಿಂತ ಹೆಚ್ಚಿನ ಆನಂದ ಬೇರೆಲ್ಲೂ ದೊರೆಯದ ಕಾರಣ, ನಾನು ಬಲು ಮುದದಿಂದ ನಿಮ್ಮ ಪ್ರವಚನಗಳನ್ನು ಆಲಿಸುತ್ತಿದ್ದೆ. ಆದರೆ ವಿಷಾದವೆಂದರೆ, ಇಲ್ಲಿ ಒಂದು ವಿಷಯ ತಪ್ಪಾಗಿದೆ. ರಾವಣನ ಉದ್ಯಾನವನದಲ್ಲಿ ನೀವು ವಿವರಿಸಿದಂತೆ ಪುಷ್ಪಗಳು ಶ್ವೇತವರ್ಣದ್ದಾಗಿರಲಿಲ್ಲ, ಅವು ಕೆಂಬಣ್ಣದ್ದಾಗಿದ್ದುವು. ಇದು ಅಕ್ಷರಶಃ ಸತ್ಯ, ಏಕೆಂದರೆ ಅಲ್ಲಿದ್ದ ನಾನು ನನ್ನ ಕಣ್ಣಾರೆ ಕಂಡಿದ್ದೇನೆ" ಎಂದನು.

ದಿವ್ಯದೃಷ್ಟಿಯ ವರದಾನ ಪಡೆದವರಾಗಿದ್ದರಿಂದ, ರಾಮದಾಸರು ಕಥೆ ಹೇಳುವ ರೀತಿಯಲ್ಲಿ ಒಂದು ಸೊಗಸಿತ್ತು. ಅವರು ಅನೇಕರು ಮಾಡುವಂತೆ ರಾಮಾಯಣದ ಕಥೆಯನ್ನು ಕೇವಲ ಪುನರಾವರ್ತಿಸದೆ, ಭಗವದ್ಗೀತೆಯ ಸಂಜಯನಂತೆ, ಪ್ರತ್ಯಕ್ಷದರ್ಶಿಯಾಗಿ ವಿವರಿಸುತ್ತಿದ್ದರು. ಅಂತಹ ಗ್ರಾಹ್ಯಶಕ್ತಿಯೊಡನೆ ಬರುವ ಆತ್ಮವಿಶ್ವಾಸದೊಂದಿಗೆ, ಆ ವಿಷಯದಲ್ಲಿ

ಹನುಮಂತನ ಸ್ಮೃತಿಯೇ ತಪ್ಪಾಗಿರಬೇಕು, ಏಕೆಂದರೆ ಹೂವುಗಳು ಖಂಡಿತವಾಗಲೂ ಶ್ವೇತವರ್ಣದ್ದಾಗಿದ್ದುವು ಎಂದು ಅವರು ಆತನಿಗೆ ಹೇಳಿದರು.

"ಹಾಗಾದರೆ ಶ್ರೀರಾಮನನ್ನೇ ಕೇಳೋಣ," ಎಂದು ಹನುಮಂತ ಘೋಷಿಸಲು, ಇಬ್ಬರೂ ಹೊರಟರು. ಇಬ್ಬರ ಅಭಿಪ್ರಾಯವನ್ನು ಕೇಳಿದ ಶ್ರೀರಾಮ, "ಕ್ಷಮಿಸಿ, ನಾನು ಆ ಸಮಯದಲ್ಲಿ ಅಲ್ಲಿರದ ಕಾರಣ ನಿಮ್ಮ ವ್ಯಾಜ್ಯವನ್ನು ಪರಿಹರಿಸಲು ಸಾಧ್ಯವಿಲ್ಲ" ಎಂದನು. ಅವರಿಬ್ಬರು ರಾಮನಿಂದ ಬೀಳ್ಕೊಂಡರು. "ಸೀತಾಮಾತೆಯನ್ನೇ ಕೇಳೋಣ. ಪುಷ್ಪಗಳ ಬಣ್ಣ ಕೆಂಪೆಂದು ಆಕೆ ಹೇಳಬಲ್ಲಳು." ಎಂದು ಹನುಮಂತ ಹೇಳಿದ.

ಅವರು ವಿಷಯವನ್ನು ಸೀತಾಮಾತೆಗೆ ತಿಳಿಸಿದಾಗ ಆಕೆ, "ರಾಮದಾಸರು ಸತ್ಯವನ್ನೇ ನುಡಿಯುತ್ತಿದ್ದಾರೆ. ಪುಷ್ಪಗಳ ಬಣ್ಣ ಅಚ್ಚ ಬಿಳಿಯಾಗಿತ್ತು, ಕೆಂಪಲ್ಲ," ಎಂದಳು. ಆಶ್ಚರ್ಯಚಕಿತನಾದ ಹನುಮಂತನು, "ಅದು ಹೇಗೆ ಸಾಧ್ಯ? ಕೆಂಪು ಹೂಗಳನ್ನು ನಾನು ಕಣ್ಣಾರೆ ನೋಡಿದ್ದೇನೆ," ಎಂದನು.

"ಹೌದು, ನೀನು ಅವುಗಳನ್ನು ಕೆಂಪಾಗಿಯೇ ಕಂಡೆ, "ಆದರೆ ನಾನು ರಾವಣನ ಬಂದಿಯಾಗಿರುವುದನ್ನು ಕಂಡು, ನಿನ್ನ ದೃಷ್ಟಿಯನ್ನು ಕ್ರೋಧದ ಮುಸುಕು ಆವರಿಸಿತ್ತು. ಆದುದರಿಂದಲೇ ಬಿಳಿಯ ಹೂಗಳೂ ನಿನಗೆ ಕೆಂಪಾಗಿ ಕಂಡವು," ಎಂದು ಸೀತೆ ವಿವರಿಸಿದಳು.

ಹನುಮಂತನು ಅದೆಷ್ಟು ಕ್ರುದ್ಧನಾಗಿದ್ದನೆಂದರೆ ಆ ರೋಷ ಆತನ ದೃಷ್ಟಿಯನ್ನೇ ಬದಲಿಸಿತ್ತು. ಬಿಳಿಯ ಹೂಗಳೂ ಕೆಂಬಣ್ಣ ಪಡೆದಿದ್ದುವು. ಕ್ಷಣಕಾಲ ಮಾಯೆಯಲ್ಲಿ ಸಿಲುಕಿದ ಆತನು, ಸತ್ಯವನ್ನು ಮಿಥ್ಯೆಯೆಂದು ಮತ್ತು ಮಿಥ್ಯೆಯನ್ನು ಸತ್ಯವೆಂದು ತಿಳಿದನು. ದೋಷಯುಕ್ತ ವಿಚಾರದಿಂದಾಗಿ ಬಂದ ತಪ್ಪು ತಿಳಿವಳಿಕೆಯ ಸ್ಥಿತಿಯದು.

ಅಂತೆಯೆ, ಅಂಜುಬುರುಕ ಯಾತ್ರಿಯೊಬ್ಬನು ರಾತ್ರಿ ಏಕಾಂಗಿಯಾಗಿ ನಡೆಯುತ್ತಿರುವನೆಂದುಕೊಳ್ಳಿ. ಕತ್ತಲಲ್ಲಿ ಮಿಣುಕುಹುಳುವನ್ನು ಕಂಡು ಅದನ್ನು ಭೂತವೆಂದು, ಹಾಗು ಹಗ್ಗವನ್ನು ಕಂಡು ಹಾವೆಂದುಕೊಳ್ಳುತ್ತಾನೆ. ತಡರಾತ್ರಿಯಲ್ಲಿ ಪತಿ ತನ್ನ ಮೇಲಧಿಕಾರಿಯೊಂದಿಗೆ ಮಾತನಾಡುವುದನ್ನು ಕಂಡ ಪತ್ನಿ ಆತನ ಚಾರಿತ್ರ್ಯವನ್ನು ಶಂಕಿಸಬಹುದು. ಎರಡೂ ಸಂದರ್ಭಗಳಲ್ಲಿ ಸತ್ಯವೇನೆಂದು ಕಾಣದಾಗಿದೆ, ಏಕೆಂದರೆ ಸತ್ಯವನ್ನು ದೋಷಯುಕ್ತ ಶೋಧಕದಿಂದ ಗ್ರಹಿಸಲಾಗುತ್ತಿದೆ. ಎರಡೂ ಘಟನೆಗಳು ಅಜ್ಞಾತದಿಂದ ಆರಂಭವಾಗುತ್ತವೆ: ಅಜ್ಞಾತ ಬೆಳಕಿನ ಮೂಲ, ಅಜ್ಞಾತ ಹಗ್ಗದ ಗುರುತು, ಅಜ್ಞಾತ ವ್ಯಕ್ತಿಯ ಕರೆ. ಪ್ರತಿ ಕ್ಷಣವೂ ನಾವು ಅಜ್ಞಾತವನ್ನು ಎದುರಿಸುತ್ತೇವೆ, ಆದರೆ ಅದು ಭ್ರಮೆಯನ್ನು ಹುಟ್ಟುಹಾಕಬೇಕಿಲ್ಲ.

ಬಾಬೂಜಿ ಮಹಾರಾಜರು ಈ ಮಾಯೆಯ ಕಾರಣವನ್ನು ಗುರುತಿಸಿದ್ದಾರೆ. ಸತ್ಯವನ್ನು ಸತ್ಯವನ್ನಾಗಿ ನೋಡದಿರುವುದಕ್ಕೆ, ದೋಷಯುಕ್ತ ವಿಚಾರ ಮತ್ತು ತಪ್ಪು ತಿಳಿವಳಿಕೆಗೆ ಕಾರಣ, ನಾವು ಹೊತ್ತು ಬಂದಿರುವ ಸಂಸ್ಕಾರಗಳೆಂಬ ಅಂತರಂಗದಲ್ಲಿನ ಹೊರೆ.

ಸತ್ಯವನ್ನು ಸತ್ಯವನ್ನಾಗಿ ನೋಡದಿರುವುದಕ್ಕೆ, ದೋಷಯುಕ್ತ ವಿಚಾರ
ಮತ್ತು ತಪ್ಪು ತಿಳಿವಳಿಕೆಗೆ ಕಾರಣ, ನಾವು ಹೊತ್ತು ಬಂದಿರುವ
ಸಂಸ್ಕಾರಗಳೆಂಬ ಅಂತರಂಗದಲ್ಲಿನ ಹೊರೆ.

ಸಂಸ್ಕಾರಗಳೆಂದರೆ ಭಾವನಾತ್ಮಕವಾಗಿ ಪ್ರಭಾವ ಬೀರುವ ಅನುಭವಗಳ ಗುರುತುಗಳು. ನಮ್ಮ ಪ್ರಜ್ಞೆಯಲ್ಲಿ ನೆಲೆಸಿ ಸುಪ್ತಪ್ರಜ್ಞೆಯಲ್ಲಿ ಉಳಿದುಕೊಳ್ಳುತ್ತವೆ. ಇವುಗಳು ನಮ್ಮ ಜೀವನದ ಮೇಲೆ ಅಪ್ರಜ್ಞಾಪೂರ್ವಕವಾಗಿ ಪರಿಣಾಮವನ್ನು ಬೀರುತ್ತ, ಪ್ರಸ್ತುತ ವಾಸ್ತವವನ್ನು ಪೂರ್ವಾನುಭವಗಳ ಮಸೂರದ ಮೂಲಕ ನೋಡುವಂತೆ ಮಾಡುತ್ತವೆ. ನಮ್ಮ ಹಳೆಯ ಭಾವನೆಗಳು ಮತ್ತು ವಿಚಾರಗಳು ಪ್ರಸ್ತುತ ವಾಸ್ತವದ ಮೇಲೆ ಪ್ರಕ್ಷೇಪಿತವಾಗುವುದರಿಂದ ಅದು ಪೂರ್ವಗ್ರಹ ಪೀಡಿತವಾಗುತ್ತದೆ. ಈ ಭಾವನಾತ್ಮಕ ಸ್ಮೃತಿಸಂಗ್ರಹವು, ಸನ್ನಿವೇಶಗಳನ್ನು ನಾವು ಗ್ರಹಿಸುವ ಪರಿಯನ್ನು ಪ್ರಭಾವಿಸುತ್ತದೆ. ಅಂದರೆ, ಜಗತ್ತನ್ನು ನಾವು ಬಣ್ಣದ ಗಾಜಿನ ಮೂಲಕ ನೋಡಿದಂತಾಗುತ್ತದೆ.

ಇದು ನನಗೆ 'ವಿಝರ್ಡ್ ಆಫ್ ಆಜ಼್' ಚಲನಚಿತ್ರವನ್ನು ನೆನಪಿಸುತ್ತದೆ; ಅದರಲ್ಲಿ ಆಜ಼್ ನಗರದಲ್ಲಿ ಎಲ್ಲವೂ ಪಚ್ಚೆಹಸುರಿನ ಬಣ್ಣದ್ದಾಗಿವೆಯೆಂದು ನಂಬಿರುತ್ತಾರೆ, ಆದರದು ಕೇವಲ ಭ್ರಮೆಯಾಗಿರುತ್ತದೆ. ಆಜ಼್ ಇತರ ನಗರಗಳಂತೆಯೆ ಇರುತ್ತದೆ. ಹಸಿರಿನ ಭ್ರಮೆಯನ್ನು ಉಳಿಸಿಕೊಳ್ಳಲು ಪ್ರತಿಯೊಂದು ಪ್ರಜೆಗೂ ಹಸಿರು ಗಾಜಿನ ಕನ್ನಡಕವನ್ನು ಕೊಟ್ಟು, ಅದನ್ನು ಸದಾ ಧರಿಸಿರಬೇಕೆಂದು ಹೇಳಲಾಗಿರುತ್ತದೆ. ಬಣ್ಣದ ಗಾಜು ಇಡೀ ನಗರವೇ ಹಸಿರಾಗಿದೆಯೆಂಬ ಮಿಥ್ಯಾ ನಂಬಿಕೆಯನ್ನು ಪ್ರಜೆಗಳಲ್ಲಿ ತಂದಿರುತ್ತದೆ.

ಈ ಭಾವನಾತ್ಮಕ ಸ್ಮೃತಿಸಂಗ್ರಹವು,
ಸನ್ನಿವೇಶಗಳನ್ನು ನಾವು ಗ್ರಹಿಸುವ
ಪರಿಯನ್ನು ಪ್ರಭಾವಿಸುತ್ತದೆ. ಅಂದರೆ,
ಜಗತ್ತನ್ನು ನಾವು ಬಣ್ಣದ ಗಾಜಿನ ಮೂಲಕ
ನೋಡಿದಂತಾಗುತ್ತದೆ.

ಇದೇನೋ ಕಟ್ಟುಕಥೆಯಾಯಿತು, ಆದರೆ ನಮ್ಮ ನಿಜಜೀವನದ ದೃಷ್ಟಿಯೂ ಅಷ್ಟೇ ವಿರೂಪಗೊಂಡಿದೆ. ಜೀವನದಲ್ಲಿ ನಾವು ಎದುರುಗೊಳ್ಳುವ ಪೂರ್ವಗ್ರಹಗಳು ಅದಕ್ಕಿಂತ ಅಧ್ವಾನವಾಗಿರುತ್ತವೆ. ಏಕೆಂದರೆ 'ಆಜ಼್'ನ ಪ್ರಜೆಗಳ ದೃಷ್ಟಿ ಮಸುಕಾಗಲು ಕಾರಣ ಒಂದು ಬಣ್ಣದ ಕನ್ನಡಕವಷ್ಟೆ, ಆದರೆ ನಮ್ಮ ಗ್ರಹಿಕೆಯನ್ನು ಮಸುಕಾಗಿಸಲು ಅನೇಕ ಶೋಧಕಗಳಿವೆ. ಕನ್ನಡಕವನ್ನು ಸುಲಭವಾಗಿ ತೆಗೆದಿಡಬಹುದು, ಆದರೆ ನಮ್ಮಲ್ಲಿನ ಶೋಧಕಗಳು ಅದೆಷ್ಟು ಆಳವಾಗಿ ಅಡಕವಾಗಿವೆಯೆಂದರೆ, ನಮ್ಮ ಆತ್ಮವು ಅವುಗಳನ್ನು ಪ್ರಜ್ಞೆಯೊಂದಿಗೆ ಜನ್ಮಜನ್ಮಾಂತರಗಳಿಗೂ ಕೊಂಡೊಯ್ಯುತ್ತದೆ. ನಾವು ಧರಿಸುವ "ಕನ್ನಡಕ"ದ ಬಣ್ಣ ಒಂದೇ ಆಗಿರುವುದಿಲ್ಲ. ಅದರ ಗಾಜಿನಲ್ಲಿ ಅಡಕಗೊಂಡಿರುವ ಅನೇಕಾನೇಕ ಬಣ್ಣಗಳು ಅದನ್ನು ಬಹುತೇಕ ಅಪಾರದರ್ಶಕವನ್ನಾಗಿಸುತ್ತವೆ. ಜೊತೆಗೆ, ಈ ಶೋಧಕಗಳು ಯಾವುದೇ ಮುನ್ಸೂಚನೆಯಿಲ್ಲದೆ ಧುತ್ತೆಂದು ಎದುರಾಗುತ್ತವೆ. ಸತ್ಯದ ಪ್ರಕಾಶ ನಮ್ಮ ಪ್ರಜ್ಞೆಯನ್ನು ಪ್ರವೇಶಿಸಲು ಅಡ್ಡಿಯಾದಾಗ, ನಾವು ಅಂಧಕಾರದಲ್ಲಿ ಮುಳುಗುತ್ತೇವೆ. ಅದೊಂದು ನರಕವಿದ್ದಂತೆ.

ಸಂಸ್ಕಾರಗಳು ನಮ್ಮ ಗ್ರಹಿಕೆಯನ್ನು ಪೂರ್ವಗ್ರಹಪೀಡಿತವನ್ನಾಗಿಸಿ, ವಿಷಯಗಳನ್ನು ಒಳಿತು ಅಥವಾ ಕೆಡುಕೆಂದು ನಿರ್ಧರಿಸುವಂತೆ ಮಾಡುತ್ತವೆ. ನಾವು ಕೆಲವು ವಸ್ತುಗಳನ್ನು ಸುಂದರವೆಂದು ಮತ್ತೆ ಕೆಲವನ್ನು ಕುರೂಪವೆಂದು ನಿರ್ಣಯಿಸುತ್ತೇವೆ. ಕೆಲವನ್ನು ಪವಿತ್ರವೆಂದು, ಇನ್ನು ಕೆಲವನ್ನು ಅಪವಿತ್ರವೆಂದು ನಿರ್ಧರಿಸುತ್ತೇವೆ. ಪಾವಿತ್ರ್ಯ ಎಲ್ಲೆಲ್ಲೂ ಇದೆ, ಸೌಂದರ್ಯ ಎಲ್ಲೆಲ್ಲೂ ಇದೆಯೆಂಬುದು ನಮಗೆ ತಿಳಿಯದಾಗುತ್ತದೆ. ನಿರ್ಣಯವು ನೋಡುವವನ ಕಣ್ಣಿನಲ್ಲಿರುತ್ತದೆ. ನಾವು, ಅದು ವಾಸ್ತವತೆಯನ್ನು ಆವರಿಸುವಂತೆ ಮಾಡುತ್ತೇವೆ. ನಿಜವಾದ ಪಕ್ಷಪಾತರಹಿತ ದೃಷ್ಟಿಯು, ವಸ್ತುಗಳನ್ನು ಯಾವುದೇ ವ್ಯತ್ಯಯವಿಲ್ಲದೆ, ಭಾವನಾತ್ಮಕ ಸ್ತರದ ಪೂರ್ವನಿರ್ಧಾರ ಅಥವಾ ಜಿಜ್ಞಾಸೆಯಿಲ್ಲದೆ ಅವು ಇದ್ದಂತೆಯೆ ಕಾಣುತ್ತದೆ. ಎಲ್ಲ ಶೋಧಕಗಳು ನಿರ್ಮೂಲವಾದ ನಂತರವೇ ದಿವ್ಯದೃಷ್ಟಿ ಉದಯಿಸುತ್ತದೆ; ನಮ್ಮ ಶಾಸ್ತ್ರಗಳು ಈ ಪರಿಶುದ್ಧ ದೃಷ್ಟಿಯನ್ನೇ ದರ್ಶನವೆಂದಿದ್ದಾರೆ.

**ನಿಜವಾದ ಪಕ್ಷಪಾತರಹಿತ ದೃಷ್ಟಿಯು, ವಸ್ತುಗಳನ್ನು ಯಾವುದೇ ವ್ಯತ್ಯಯವಿಲ್ಲದೆ, ಭಾವನಾತ್ಮಕ ಸ್ತರದ ಪೂರ್ವನಿರ್ಧಾರ ಅಥವಾ ಜಿಜ್ಞಾಸೆಯಿಲ್ಲದೆ ಅವು ಇದ್ದಂತೆಯೆ ಕಾಣುತ್ತದೆ. ಎಲ್ಲ ಶೋಧಕಗಳು ನಿರ್ಮೂಲವಾದ ನಂತರವೇ ದಿವ್ಯದೃಷ್ಟಿ ಉದಯಿಸುತ್ತದೆ; ನಮ್ಮ ಶಾಸ್ತ್ರಗಳು ಈ ಪರಿಶುದ್ಧ ದೃಷ್ಟಿಯನ್ನೇ ದರ್ಶನವೆಂದಿದ್ದಾರೆ.**

ಬಹಳಷ್ಟು ಜನರು ದರ್ಶನವನ್ನು ಒಬ್ಬ ಪವಿತ್ರಾತ್ಮನ ಕ್ಷಣಿಕ ದರ್ಶನವೆಂದು ಸೀಮಿತವಾಗಿ ಅರ್ಥೈಸಿಕೊಂಡಿದ್ದಾರೆ. ಆದರೆ ಶ್ರೀಕೃಷ್ಣನನ್ನು ನೋಡಿದವರು ಅನೇಕರಿದ್ದರೂ, ಅವನು ಯಾರೆಂದು ಅರಿತವರು ಒಬ್ಬರೂ ಇರಲಿಲ್ಲ. ಹಾಗಾಗಿ, ನಿಜವಾದ ಅರ್ಥದಲ್ಲಿ ಅವನ ದರ್ಶನ ಪಡೆದವರಾರು? ಇದು ನನಗೆ ಬಾಬೂಜಿಯವರ ವಾಕ್ಯವೊಂದನ್ನು ನೆನಪಿಸುತ್ತದೆ: "ನನ್ನನ್ನು ನೋಡಲು ಬರುವವರು ಹಲವಾರು, ಆದರೆ ಯಾರೂ ನನ್ನನ್ನು ನಿಜವಾಗಿ ಕಾಣರು."

ಅನೇಕರು ಶ್ರೀಕೃಷ್ಣನನ್ನು ದ್ವೇಷಿಸುತ್ತಿದ್ದರು. ಆತನನ್ನು ಪ್ರೀತಿಸಿದವರು ಕೆಲವರಷ್ಟೆ. ದುರ್ಯೋಧನ ಆತನ್ನು ಮಾಯಾವಿಯೆಂದು ಹಳಿದನು. ಅರ್ಜುನ ಆತನನ್ನು ಅಭಿಮಾನದಿಂದ ಕಂಡನಾದರೂ, ಸ್ನೇಹಿತನೆಂಬ ಭಾವನೆಯಿಂದ ಸಂಬಂಧವನ್ನು ಸೀಮಿತಗೊಳಿಸಿದನು. ಕೃಷ್ಣನ ಮೇಲೆ ಅಗಾಧ ಪ್ರೇಮವಿದ್ದು, ಆತನನ್ನು ಆರಾಧಿಸಿದ ರಾಧೆಯೂ ಸಹ, ಜಗದೊಡೆಯನಾಗಿ ಆತನ ಪೂರ್ಣತ್ವವನ್ನು ಅರಿಯದಾದಳು. ಆತನನ್ನು ನೋಡಿದ ಪ್ರತಿಯೊಬ್ಬರಲ್ಲೂ ವಿಭಿನ್ನ ದೃಷ್ಟಿಕೋನವಿತ್ತು; ಸಂಪೂರ್ಣ ಸತ್ಯವನ್ನು ಯಾರೂ ಕಾಣಲಿಲ್ಲ.

ಅದೇಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಅನನ್ಯ. ಜಗತ್ತಿನ ಕೋಟ್ಯಂತರ ಜನರಲ್ಲಿ ನಾವು ಒಟ್ಟಾರೆ ಅದೆಷ್ಟು ಮುದ್ರೆಗಳನ್ನು ಹೊತ್ತಿದ್ದೇವೆ; ಏಕಕಾಲದಲ್ಲಿ ನಾವು ಭೂಮಿಯ ಮೇಲಿರುವವರೆಗೆ ಅದೆಷ್ಟು ರೂಢಿಗತ ವರ್ತನೆಗಳನ್ನು ತರುತ್ತೇವೆ; ಮತ್ತು ಅದೆಷ್ಟು ವೈಯಕ್ತಿಕ ದೃಷ್ಟಿಕೋನಗಳಿವೆ! ಸಾಮಾನ್ಯವಾಗಿ ಇದರ ಪರಿಣಾಮವೆಂದರೆ ಅಸಮ್ಮತಿ ಹಾಗು ಭಿನ್ನಮತ.

ನಾವು ಮೊದಲಿನಿಂದಲೂ ಹೀಗಿರಲಿಲ್ಲ. ಮೂಲತಃ, ಪ್ರತಿಯೊಂದು ಪ್ರಜ್ಞೆಯೂ ತದ್ರೂಪವಾಗಿತ್ತು. ಎಲ್ಲರಲ್ಲೂ ಸತ್ಯದ ಪರಿಶುದ್ಧ ಕಾಣ್ಕೆಯಿತ್ತು. ತಪ್ಪು ಆಲೋಚನೆಗಳಿಂದ ಭಿನ್ನಾಭಿಪ್ರಾಯಗಳು ಮೂಡಿದುವು, ನಾವು ನಮ್ಮದೇ ಪುಟ್ಟ ಪ್ರಪಂಚವನ್ನು ಕಟ್ಟಿಕೊಳ್ಳಲು ಆರಂಭಿಸಿದೆವು. ನಮ್ಮ ಈ ಪ್ರಪಂಚಗಳನ್ನು ಬಾಬೂಜಿಯವರು ದ್ವೀಪಗಳೆನ್ನುತ್ತಾರೆ; ಇವು ಏಕತೆಯಿಂದ ಹಾಗು ಪರಸ್ಪರರಿಂದ ದೂರವಾಗಿ, ವೈಯಕ್ತಿಕತೆ, ಪ್ರತ್ಯೇಕತೆ ಮತ್ತು ಅಹಂಕಾರಭರಿತ ಜೀವನದೆಡೆಗೆ ಒಯ್ಯುವ ದ್ವೀಪಗಳು.

ಸ್ವಾರ್ಥವು ಅಹಂಕಾರದ ಸ್ವಭಾವವಾಗಿದ್ದು, ತನ್ನ ಉಳಿವಿಗಾಗಿ ಪ್ರಯತ್ನಿಸುತ್ತದೆ. ಅಹಂಕಾರಕ್ಕಿರುವ ಅತಿ ದೊಡ್ಡ ಭಯವೆಂದರೆ, ಅದರ ಅಸ್ಮಿತೆಯ ನಾಶ. ಅದರ ದೃಷ್ಟಿಯಲ್ಲಿ, ಅಹಂಕಾರದ ಮೃತ್ಯುವಿಗಿಂತ ಶಾರೀರಿಕ ಮೃತ್ಯು ಲೇಸು. ತನ್ನ ಅಸ್ತಿತ್ವದ ಉಳಿವಿನ ವಿಚಾರದಲ್ಲೇ ಮುಳುಗಿರುವ ಅಹಂ, ತಾನಿರುವುದನ್ನು ಖಚಿತಪಡಿಸಿಕೊಳ್ಳಲು ಕನ್ನಡಿಯಲ್ಲಿ ನೋಡಿಕೊಳ್ಳುವಂತೆ ಸದಾ ತನ್ನನ್ನು ತಾನೇ ನೋಡಿಕೊಳ್ಳಲಿಚ್ಛಿಸುತ್ತದೆ.

ರೂಪರಹಿತವಾದ ಅಹಂ ತನ್ನನ್ನು ತಾನು ಹೇಗೆ ನೋಡುತ್ತದೆ? ಇದಕ್ಕೆ ಉತ್ತರವೆಂದರೆ, ಅದು ವ್ಯಕ್ತಿನಿಷ್ಠ ಜ್ಞಾತೃವಿನ ಬಾಹ್ಯದಲ್ಲಿರುವ ಹಾಗು ಅವನು ಗ್ರಹಿಸಬಲ್ಲ ಜ್ಞಾತ ವಸ್ತುಗಳೊಂದಿಗೆ ಗುರುತಿಸಿಕೊಳ್ಳುತ್ತದೆ. ಬಹಿರಂಗದಲ್ಲಿರುವುದನ್ನು ತೋರಿಸುತ್ತ, "ಅದು ನಾನು," ಎಂದು ಘೋಷಿಸುವ ಮೂಲಕ ತೃಪ್ತವಾಗುತ್ತದೆ. ಈ ರೀತಿಯಾಗಿ, ಅದು ಮನಸ್ಸು, ದೇಹ, ಅಥವಾ  ತನ್ನಿಂದ ಹೊರತಾದ ಸಂಸ್ಕೃತಿ, ಭಾಷೆ, ರುಚಿ, ಆಸ್ತಿ–ಪಾಸ್ತಿಗಳೊಂದಿಗೂ ತನ್ನನ್ನು ಗುರುತಿಸಿಕೊಳ್ಳಬಹುದು.

ಒಮ್ಮೆ, ಪತ್ರವೊಂದಕ್ಕೆ ಉತ್ತರಿಸುತ್ತ ಬಾಬೂಜಿಯವರು ಬರೆದಿದ್ದರು: "ನೀವು *ಮಹಾಪುರುಷರ* ದರ್ಶನವನ್ನು ಪಡೆಯಲಿಚ್ಛಿಸುವುದು ಒಳ್ಳೆಯದು. ಅದಕ್ಕಿಂತ ಉತ್ತಮವೆಂದರೆ ಸ್ವತಃ ನಿಮ್ಮದೇ ದರ್ಶನವನ್ನು ಮಾಡಲೆತ್ನಿಸಿ." ನಿಜವಾದ ಆತ್ಮದರ್ಶನಕ್ಕಾಗಿ, ಅಹಂ ಒಟ್ಟುಗೂಡಿಸಿದ ಮಿಥ್ಯಾಸ್ವರೂಪಗಳನ್ನೆಲ್ಲ ನಾವು ಬಿಟ್ಟುಕೊಡಬೇಕಾಗುತ್ತದೆ. ಆದರೆ ಅಹಂ ತನ್ನ ಮಿಥ್ಯಾಸ್ವರೂಪಗಳಿಗೆ ಬಲವಾಗಿ ಅಂಟಿಕೊಂಡಿರುತ್ತದೆ. ಅದಕ್ಕೆ ಅಪಾಯವೆಂದು ಕಂಡುಬಂದಾಗ ಅದು ತೀವ್ರರೂಪದಲ್ಲಿ ಪ್ರತಿಕ್ರಿಯಿಸಬಹುದು. ನಿಮ್ಮದೇ ಭಾಗವೆಂದುಕೊಂಡ ಯಾವುದನ್ನಾದರೂ, ಅಂದರೆ ನಿಮ್ಮ ಧರ್ಮ, ನಿಮ್ಮ ರಾಷ್ಟ್ರ, ನಿಮ್ಮ ಸಮುದಾಯ, ನಿಮ್ಮ ಕುಟುಂಬವನ್ನು ಟೀಕಿಸಿದಾಗ ನಿಮಗೆ ಹೇಗನ್ನಿಸುವುದೆಂದು ಆಲೋಚಿಸಿ. ಆ ಭಾವನೆಯ ತೀವ್ರತೆಯೇ ಅಹಂನ ಗುರುತುಗಳ ತೀವ್ರತೆಗೆ ಸಾಕ್ಷಿ; ಅವು ನೈಜಸ್ವರೂಪದ ಮುಖವಾಡಗಳು.

ಸ್ವಸಮರ್ಥನೀಯ ಅಹಂಗಳು ಏಕತೆಯ ವಿಧ್ವಂಸಕಗಳು. ಸಮೂಹದಲ್ಲಿ ಕಾರ್ಯ ನಿರ್ವಹಿಸುವಾಗ ಇತರರು ನಿಮಗಿಂತ ಭಿನ್ನವಾದುದನ್ನು ಮಾಡಬಯಸಬಹುದು. ನೀವು ನಿಮ್ಮ ವಿಚಾರಗಳೊಂದಿಗೆ ಅತಿಯಾಗಿ ಗುರುತಿಸಿಕೊಂಡರೆ, ಇತರರು ನೀಡುವ ರಚನಾತ್ಮಕ ಸಲಹೆಗಳೂ ಸಹ ವೈಯಕ್ತಿಕ ಬೆದರಿಕೆಯಂತೆ ತೋರಬಹುದು. ಗುಂಪಿನ ಪ್ರತಿಯೊಬ್ಬರೂ "ನಾನು ಹೇಳಿದಂತೆ ಮಾಡಿರಿ ಇಲ್ಲವೇ ತೊಲಗಿರಿ" ಎಂಬ ಮನೋಭಾವದೊಂದಿಗೆ ಕೆಲಸ ಮಾಡುವುದನ್ನು ಕಲ್ಪಿಸಿಕೊಳ್ಳಿ! ಅದರ ಪರಿಣಾಮವನ್ನು ಊಹಿಸಿಕೊಳ್ಳಿ! ನಾವು ನಮ್ರತೆಯಿಂದಿದ್ದು, ಅಹಂನ್ನು ಯುದ್ಧಕಣಕ್ಕಿಳಿಸದಿದ್ದರೆ, ಭಿನ್ನಾಭಿಪ್ರಾಯಗಳು ಸ್ವೀಕಾರಾರ್ಹವಾಗಿರುತ್ತವೆ.

ನಮ್ಮನ್ನು ದೈವೀಚೈತನ್ಯದ ವಾಹಕರನ್ನಾಗಿ ಮಾಡುವ ಗುರುಗಳ ಕಾರ್ಯಕ್ಕೆ ಅಹಂಭರಿತ ಕಾರ್ಯವೈಖರಿ ತಡೆಯನ್ನೊಡ್ಡುತ್ತದೆ. ದೈವೀಚೈತನ್ಯದ ಹರಿವಿಗೆ ನಮ್ಮೊಳಗಿನ ವಿರೋಧವನ್ನು ಎದುರಿಸಿದಾಗ, ಘರ್ಷಣೆ ಉಂಟಾಗುತ್ತದೆ. ಧ್ಯಾನದಲ್ಲಿ ಉಂಟಾಗುವ "ಸೆಡೆತಗಳು" (ಜರ್ಕ್)  ನಮ್ಮ ವ್ಯವಸ್ಥೆಯಲ್ಲಿರುವ ಅಡ್ಡಿಗಳ ಸೂಚನೆಯಾಗಿವೆ.

ಅಹಂಕಾರ ಹಾಗು ಸಂಸ್ಕಾರಗಳೆರಡೂ ಜೊತೆಗಾರರು. ನಾವು ಭಾವೋದ್ವೇಗದಿಂದ ಸ್ಪಂದಿಸಿದಾಗ ಸಂಸ್ಕಾರಗಳು ರೂಪುಗೊಳ್ಳುತ್ತವೆ. ನಮ್ಮೊಳಗೆ ಪ್ರತಿಕ್ರಿಯಿಸುವ ಅಹಂಕಾರವು ಸಂಸ್ಕಾರದ ರೂಪಣವನ್ನು ಪ್ರಚೋದಿಸುತ್ತದೆ. ಅಹಂಕಾರ ಪ್ರತಿಕ್ರಿಯಿಸುವುದೇಕೆ? ಅದರ ಅಸ್ಮಿತೆಗಳಲ್ಲೊಂದು ವರ್ಧಿಸಿದಾಗ ಅಥವಾ ಅಪಾಯದ ಸಾಧ್ಯತೆಯನ್ನೆದುರಿಸಿದಾಗ ಅದು ಪ್ರತಿಕ್ರಿಯಿಸುತ್ತದೆ. ಈ ಪ್ರತಿಕ್ರಿಯೆ ಇಷ್ಟಾನಿಷ್ಟಗಳ ರೂಪದಲ್ಲಿ ಬರುತ್ತದೆ. ಆ ಪ್ರತಿಕ್ರಿಯೆ ಉಂಟುಮಾಡುವ ಸಕಾರಾತ್ಮಕ ಅಥವಾ ನಕಾರಾತ್ಮಕ ಭಾವನೆಯು ನಂತರ ಮುದ್ರೆಯಾಗಿ ಬದಲಾಗುತ್ತದೆ.

ನಿಜವಾದ ಆತ್ಮದರ್ಶನಕ್ಕಾಗಿ, ಅಹಂ ಒಟ್ಟುಗೂಡಿಸಿದ ಮಿಥ್ಯಾಸ್ವರೂಪಗಳನ್ನೆಲ್ಲ ನಾವು ಬಿಟ್ಟುಕೊಡಬೇಕಾಗುತ್ತದೆ.


ಇದಕ್ಕೆ ಪೂರಕವಾಗಿ, ಅಹಂ ಗುರುತಿಸಿಕೊಳ್ಳುವ ವಸ್ತುಗಳನ್ನು ಸಂಸ್ಕಾರಗಳು ನಿರ್ಧರಿಸುತ್ತವೆ. ಮಾಯೆಯ ಸಹಸೃಷ್ಟಿಕರ್ತರಾದ ಅಹಂ ಹಾಗು ಸಂಸ್ಕಾರಗಳು ನಮ್ಮ ಗ್ರಹಿಕೆಯನ್ನು ಮಸುಕುಗೊಳಿಸಿ, ನಾವು ಸತ್ಯವನ್ನು ಕಾಣುವ ದೃಷ್ಟಿಯನ್ನು ವಿರೂಪಗೊಳಿಸುತ್ತವೆ.

ಅಹಂಕಾರವೆಂಬ ನೆಲದಲ್ಲಿ ಬಿತ್ತುವ ಸಂಸ್ಕಾರದ ಬೀಜಗಳಿಂದ ವೈಯಕ್ತಿಕ ನಿಯತಿಯ ವೃಕ್ಷಗಳು ಬೆಳೆಯುತ್ತವೆ. ನಮ್ಮ ಸಂಸ್ಕಾರಗಳು ಹೃದಯದ ಇಂಗಿತವನ್ನು ರಚಿಸಿದರೆ, ಮನಸ್ಸು ಅದನ್ನು ಪೂರೈಸಲು ಕಾರ್ಯನಿರತವಾಗುತ್ತದೆ. ಮನಸ್ಸಿನ ಕಾರ್ಯಗಳು ಮತ್ತು ಪ್ರವೃತ್ತಿಗಳನ್ನು ವೃತ್ತಿಗಳು ಎನ್ನುತ್ತಾರೆ. ನಮ್ಮ ವೃತ್ತಿಗಳು *ಪ್ರವೃತ್ತಿಗಳಿಗೆ* ಒತ್ತಾಸೆಯಾಗಿ ನಿಲ್ಲುತ್ತವೆ. *ವೃತ್ತಿ–ಪ್ರವೃತ್ತಿಗಳು* ಜೊತೆಗೂಡಿ, *ಸತ್ವ, ರಜಸ್* ಮತ್ತು *ತಮಸ್* ಎಂಬ ತ್ರಿಗುಣಗಳು ನಮ್ಮ *ಪ್ರಕೃತಿಯನ್ನು* ವರ್ಣಮಯವನ್ನಾಗಿ ಮಾಡುತ್ತವೆ.

ನಮ್ಮ ಸ್ವಭಾವಕ್ಕನುಗುಣವಾಗಿ, ನಾವು ಕೆಲವೊಂದು ಚಟುವಟಿಕೆಗಳನ್ನು ಪುನರಾವರ್ತಿಸುತ್ತಲೇ ಇರುತ್ತೇವೆ. ಭೋಜನಪ್ರಿಯನು ಹೋಟೆಲಿಗೆ ಹೋಗುತ್ತಲೇ ಇರುತ್ತಾನೆ. ಕಡಲ ಸವಾರನು ಅಲೆಗಳನ್ನು ಬೆನ್ನಟ್ಟುತ್ತಲೇ ಇರುತ್ತಾನೆ. ಸಿನಿಮಾಪ್ರಿಯನು ಸಿನಿಮಾಗಳನ್ನು ನೋಡುತ್ತಲೇ ಇರುತ್ತಾನೆ. ಅಂತಹ ಚಟುವಟಿಕೆಗಳು ನಿರ್ದಿಷ್ಟ ರೀತಿಗಳ ಸಂಸ್ಕಾರಗಳ ಸಂಗ್ರಹವನ್ನು ಪ್ರಚೋದಿಸುತ್ತವೆ, ಅದು ಪ್ರತಿಯೊಬ್ಬರ ಸ್ವಭಾವಕ್ಕೆ ವಿಶಿಷ್ಟವಾಗಿರುತ್ತದೆ. ಜನ್ಮಜನ್ಮಾಂತರ ಪರ್ಯಂತ ಅವಿರತ ಚಟುವಟಿಕೆಗಳು ಹಾಗು ಸಂಸ್ಕಾರ ಸಂಗ್ರಹಣೆ ನಮ್ಮ ಸ್ವಭಾವಕ್ಕೆ ಗುರುತರ ಕೊಡುಗೆಯನ್ನು ನೀಡುತ್ತವೆ. ಇದನ್ನೇ ನಾವು *ಪ್ರಾರಬ್ಧ* (ನಿಯತಿ) ಎಂದು ಅರ್ಥೈಸಿಕೊಂಡಿದ್ದೇವೆ.

ನಾವೇ ನಮ್ಮ ವೈಯಕ್ತಿಕ ವಿಧಿಯ ಸೃಷ್ಟಿಕರ್ತರು; ಆದರೆ ನಿಯತಿ ಎಂಬುದೂ ಇದೆ. ನಾವು ಸ್ವತಃ ಸೃಷ್ಟಿಸಿಕೊಂಡ ಪ್ರಪಂಚಗಳು ಕರಗಿ, ನಮ್ಮ ವೈಯಕ್ತಿಕ *ಪ್ರಳಯ* ಸಂಭವಿಸಿದಾಗ ಮಾತ್ರವೇ ಆ ನಿಯತಿಯ ದರ್ಶನ ನಮಗೆ ಸಾಧ್ಯವಾಗುತ್ತದೆ.

ಅಹಂಕಾರವೆಂಬ ನೆಲದಲ್ಲಿ ಬಿತ್ತುವ ಸಂಸ್ಕಾರದ ಬೀಜಗಳಿಂದ ವೈಯಕ್ತಿಕ ನಿಯತಿಯ ವೃಕ್ಷಗಳು ಬೆಳೆಯುತ್ತವೆ. ನಮ್ಮ ಸಂಸ್ಕಾರಗಳು ಹೃದಯದ ಇಂಗಿತವನ್ನು ರಚಿಸಿದರೆ, ಮನಸ್ಸು ಅದನ್ನು ಪೂರೈಸಲು ಕಾರ್ಯನಿರತವಾಗುತ್ತದೆ. ಮನಸ್ಸಿನ ಕಾರ್ಯಗಳು ಮತ್ತು ಪ್ರವೃತ್ತಿಗಳನ್ನು ವೃತ್ತಿಗಳು ಎನ್ನುತ್ತಾರೆ. ನಮ್ಮ ವೃತ್ತಿಗಳು ಪ್ರವೃತ್ತಿಗಳಿಗೆ ಒತ್ತಾಸೆಯಾಗಿ ನಿಲ್ಲುತ್ತವೆ. ವೃತ್ತಿ–ಪ್ರವೃತ್ತಿಗಳು ಜೊತೆಗೂಡಿ, ಸತ್ವ, ರಜಸ್ ಮತ್ತು ತಮಸ್ ಎಂಬ ತ್ರಿಗುಣಗಳು ನಮ್ಮ ಪ್ರಕೃತಿಯನ್ನು ವರ್ಣಮಯವನ್ನಾಗಿ ಮಾಡುತ್ತವೆ.




ಈ ಉದ್ದೇಶದಿಂದಲೇ ಋಷಿಶ್ರೇಷ್ಠರಾದ ಪತಂಜಲಿಯು ಯೋಗಪಥವನ್ನು ನಮಗೆ ನೀಡಿದರು. ಅದರ ಮೂಲಕ, ನಮ್ಮ ನಿಯತಿ ತಂತಾನೇ ರಚಿತವಾಗಿ, ನಾವು ಮಾಯೆಯ ಸುಳಿಯಲ್ಲೇ ಸುತ್ತುವಂತೆ ಮಾಡುವ ವೃತ್ತಿಗಳನ್ನು ಕೊನೆಗಾಣಿಸಲು ನಮಗೆ ಸಾಧ್ಯವಾಗುತ್ತದೆ. ನಮ್ಮ ವೃತ್ತಿಗಳನ್ನು ಪೋಷಿಸುವ ಸಂಸ್ಕಾರಗಳನ್ನು ನಿವಾರಿಸಲು ಮಾರ್ಗೋಪಾಯಗಳನ್ನು ರಚಿಸಿದ ಬಾಬೂಜಿಯವರ ಉದ್ದೇಶವೂ ಅದೇ ಆಗಿದೆ. 'ಚಿತ್ತವೃತ್ತಿ ನಿರೋಧ' ಎಂಬುದು ಒಂದರ್ಥದಲ್ಲಿ ಯೌಗಿಕ ಸ್ಥಿತಿಯಾಗಿದೆ. ನಮ್ಮ ವೃತ್ತಿಗಳನ್ನು ಉತ್ತೇಜಿಸಿದರೆ, ಅವೆಂದೂ ನಮ್ಮ ನೆರವಿಗೆ ಬರುವುದಿಲ್ಲ, ಆದುದರಿಂದಲೇ ಅದು ಯೋಗವಲ್ಲ, *ಅಯೋಗ್ಯ*.

ದುರದೃಷ್ಟವಶಾತ್, ತನ್ನ ಸ್ವಂತ ಸೃಷ್ಟಿಯನ್ನು ಸಮರ್ಥಿಸಿಕೊಳ್ಳುತ್ತ, *ವೃತ್ತಿ–ಪ್ರವೃತ್ತಿ–ಪ್ರಕೃತಿ–ಪ್ರಾರಬ್ಧ*ಗಳೊಂದಿಗೆ ಗುರುತಿಸಿಕೊಳ್ಳುವುದೇ ಅಹಂಕಾರದ ಸ್ವಭಾವವಾಗಿಬಿಟ್ಟಿದೆ. ಇದರಿಂದ ಬದಲಾವಣೆ ಕಠಿಣವಾಗುತ್ತದೆ. ಪೂಜ್ಯ ಚಾರೀಜಿಯವರು ಹೇಳಿರುವಂತೆ, ಮೂರ್ಖನು ತಪ್ಪು ಮಾಡಿದ ನಂತರ ಅರಿತುಕೊಳ್ಳುತ್ತಾನೆ; ಬುದ್ಧಿವಂತನು ತಪ್ಪು ಮಾಡುವಾಗ ಅರಿತುಕೊಳ್ಳುತ್ತಾನೆ; ಮತ್ತು ವಿವೇಕಿಯಾದವನು ತಪ್ಪು ನಡೆಯುವ ಮುಂಚೆಯೆ ಗುರುತಿಸಿ ಅದನ್ನು ನಿವಾರಿಸಿಕೊಳ್ಳುವನು.

ತನ್ನ ತಪ್ಪುಗಳನ್ನು ಕಂಡೂ, ತಾನು ಮಾಡಿದುದೇ ಸರಿಯೆಂದು ಹಠ ಹಿಡಿಯುವವರನ್ನು ಯಾವ ವರ್ಗಕ್ಕೆ ಸೇರಿಸುವುದು? ಅಂತಹ ವ್ಯಕ್ತಿಯ ಪರಿವರ್ತನೆಯಾಗುವುದಾದರೂ ಹೇಗೆ? ತನ್ನದೇ ಸೃಷ್ಟಿಯನ್ನು ರಚಿಸಿಕೊಳ್ಳುವುದರಲ್ಲಿ ವ್ಯಸ್ತನಾದ ವ್ಯಕ್ತಿ ತನ್ನಲ್ಲಿ ವೈಯಕ್ತಿಕ ಪ್ರಳಯವನ್ನು ಹೇಗೆ ತಂದುಕೊಳ್ಳಬಲ್ಲನು? ತಾಮ್ರವು ಬಂಗಾರವಾದಂತೆ, ಇದು ಎಂದಾದರೂ ಸಾಧ್ಯವೆ? ಪ್ರಾಯಶಃ ಇದು, ನಮ್ಮನ್ನು ನಾವು ಬದಲಾಯಿಸಿಕೊಳ್ಳುವುದರಲ್ಲಿ ವಿಫಲರಾಗುವುದನ್ನು ತಿಳಿಸುತ್ತದೆ. ಬಾಬೂಜಿಯವರ ಇಪ್ಪತ್ತಮೂರು ವೃತ್ತಗಳಿರುವ ಚಿತ್ರದಲ್ಲಿ ಅಹಂಕಾರದ ವೃತ್ತಗಳು ಮಾಯೆಯ ವೃತ್ತಗಳನ್ನು ಬೆಂಬಲಿಸುವುದನ್ನೂ ಇದು ವಿವರಿಸುತ್ತದೆ.

ಸಹಜಮಾರ್ಗ ನೀಡುವ ಆಂತರಿಕ ತರಬೇತಿಯು, ಸಂಸ್ಕಾರಗಳನ್ನು ರೂಪಿಸಿಕೊಳ್ಳದೆ ಉದಾತ್ತ ಕಾರ್ಯಗಳನ್ನು ಮಾಡುವಂಥ ಜೀವನಶೈಲಿಯಲ್ಲಿ ನಮ್ಮನ್ನು ನಿಪುಣರನ್ನಾಗಿಸುತ್ತದೆ. ಸಂಸ್ಕಾರಗಳ ಹೊರೆಯನ್ನು ಕಳೆದುಕೊಳ್ಳುವುದು ಸುಲಭ. ಸಂಸ್ಕಾರಗಳ ದೈನಂದಿನ ಸಂಗ್ರಹವನ್ನು ನಾವು ಸಂಜೆ ಮಾಡುವ ಶುದ್ಧೀಕರಣ ನಿವಾರಿಸುತ್ತದೆ. ಹುಟ್ಟಿನಿಂದ ಇದುವರೆಗೆ ಸಂಗ್ರಹವಾದ ಸಂಸ್ಕಾರಗಳನ್ನು ಪ್ರಶಿಕ್ಷಕರು ವೈಯಕ್ತಿಕ ಬೈಠಕಿನಲ್ಲಿ ಶುದ್ಧಗೊಳಿಸುತ್ತಾರೆ. ಪೂರ್ವಜನ್ಮಗಳ

ಸಂಸ್ಕಾರಗಳು *ಭಂಡಾರಗಳಲ್ಲಿ*, ಸಾಮೂಹಿಕ ಸತ್ಸಂಗಗಳಲ್ಲಿ, ಗುರುಗಳ ಭೌತಿಕ ಸನ್ನಿಧಿಯಲ್ಲಿ ಹಾಗು ಅಭ್ಯಾಸಿಯು ಶ್ರದ್ಧಾವಂತನಾಗಿದ್ದು *ಲಯಾವಸ್ಥೆಯನ್ನು* ತಲುಪಿದರೆ ಯಾವುದೇ ಸಮಯದಲ್ಲೂ ನಿವಾರಣೆಯಾಗುತ್ತವೆ.

ಸಂಸ್ಕಾರಗಳ ರೂಪಣವನ್ನು ತಡೆಯುವುದೇ ದೊಡ್ಡ ಸವಾಲು. ಈ ಪ್ರಪಂಚದಲ್ಲಿ ಜೀವನ ನಡೆಸುತ್ತ ಮುದ್ರೆಗಳನ್ನು ತಡೆಯುವುದೆಂದರೆ, ಕಲ್ಲಿದ್ದಲ ಗಣಿಯಲ್ಲಿ ಕಪ್ಪು ಧೂಳಿನಿಂದ ತಪ್ಪಿಸಿಕೊಳ್ಳಲೆತ್ನಿಸಿದಂತೆ ಅಥವಾ ಮಳೆಯಲ್ಲಿ ನಡೆಯುವಾಗ ಒದ್ದೆಯಾಗುವುದನ್ನು ತಡೆಯಲೆತ್ನಿಸಿದಂತೆ. ಮಳೆಯನ್ನು ನಮ್ಮಿಂದ ತಡೆಯಲು ಸಾಧ್ಯವಿಲ್ಲ, ಆದರೆ ರೈನ್‌ಕೋಟ್ ಧರಿಸುವ ಮೂಲಕ, ಒದ್ದೆಯಾಗುವುದನ್ನು ತಪ್ಪಿಸಿಕೊಳ್ಳಬಹುದು. ಭಾವನಾತ್ಮಕ ಬೇಗುದಿಯಲ್ಲೂ ಪ್ರಭಾವಕ್ಕೊಳಪಡದಂತೆ ಮಾಡಬಲ್ಲ ನಮ್ಮ ಮನಸ್ಸು ಮತ್ತು ಹೃದಯಗಳ ರೈನ್‌ಕೋಟ್ ಯಾವುದು? ಅದು, *ಈಶ್ವರೀಯ ಪ್ರೇಮದಿಂದ ತೊಯ್ದ ನಿರಂತರ ಸ್ಮರಣೆ ಎಂಬ ರಕ್ಷಣಾಕವಚ.*

ನಿರಂತರ ಸ್ಮರಣೆಯೆಂಬುದು ಒಂದು ವಿಶಿಷ್ಟ ಶೋಧಕ. ಮುದ್ರೆಗಳು ನಮ್ಮ ಪ್ರಜ್ಞೆಯನ್ನು ಕಲುಷಿತಗೊಳಿಸುವ ಮುನ್ನವೇ ಅದು ಅವುಗಳನ್ನು ಶೋಧಿಸುತ್ತದೆ. ವಿನಮ್ರತೆಯೆಂಬ ತನ್ನ ರಕ್ಷಣಾಕವಚದೊಂದಿಗೆ ನಿರಂತರ ಸ್ಮರಣೆಯು ಅಹಂ ಅನ್ನು ಶೋಧಿಸಿ, ದೈವತ್ವದ ಗಮ್ಯಸ್ಥಾನವನ್ನು ಸ್ಪಷ್ಟವಾಗಿ ಕಾಣುವಂತೆ ಅದು ನಮ್ಮನ್ನು ಪೂರ್ವಗ್ರಹದ ಪ್ರಭಾವದಿಂದ ರಕ್ಷಿಸುತ್ತದೆ. ನಮ್ಮ ಲಕ್ಷ್ಯವು ಹೃತ್ಪೂರ್ವಕವಾಗಿ ಸೃಷ್ಟಿಕರ್ತನ ಮೇಲಿನ ಪ್ರೇಮದಲ್ಲಿ ಮುಳುಗಿದಾಗ, ಐಹಿಕವೂ ಹಾಗು ಮಾಯೆಯೂ ದೈವಿಕವಾಗುತ್ತವೆ. ಭಗವಂತನಲ್ಲಿ ದಿವ್ಯತೆ ಇರುವುದಾದರೆ ಆತನ ಸೃಷ್ಟಿಯೂ ದೈವಿಕವಾದುದೇ, ಏಕೆಂದರೆ ಮೂಲ ಮತ್ತು ಅದರಿಂದ ಜನ್ಯವಾದುದು ಎರಡೂ ಒಂದೇ. ಎಲ್ಲವೂ ದೈವಿಕವಾಗುತ್ತದೆ.

ಪ್ರೇಮಾದರಗಳೊಂದಿಗೆ
*ಕಮಲೇಶ್*

## ಪೂಜ್ಯ ಶ್ರೀ ಬಾಬೂಜಿ ಮಹಾರಾಜರ

### 123ನೇ ಜನ್ಮದಿನೋತ್ಸವದ ಅಂಗವಾಗಿ ನೀಡಿದ ಸಂದೇಶ

### 29 ಮತ್ತು 30 ಏಪ್ರಿಲ್, 1 ಮೇ 2022

heartfulness™
advancing in love